**ಕರ್ನಾಟಕ ಸರ್ಕಾರ**

ಸಂಖ್ಯೆ: ನಅಇ 201 ಎಂಎನ್‌ವೈ 2022 (ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 07-05-2022.

**ಇವರಿಂದ,**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
ವಿಕಾಸಸೌಧ.

**ಇವರಿಗೆ,**

ಮುಖ್ಯ ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

**ಮಾನ್ಯರೇ,**

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2021-22ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2022-23ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ಸರ್ಕಾರದ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ ತಮ್ಮ ಪತ್ರ ಸಂಖ್ಯೆ: ಅ.ಆ(ಹ)/ಆಯವ್ಯಯ/2022-23/ಪಿಆರ್/09/2021-22, ದಿನಾಂಕ: 08-04-2022.

* * * * * *

ಮೇಲ್ಕಂಡ ವಿಷಯ ಮತ್ತು ಉಲ್ಲೇಖಿತ ಪತ್ರಕ್ಕೆ ಸಂಬಂಧಿಸಿದಂತೆ, ತಮ್ಮ ಉಲ್ಲೇಖಿತ ಪತ್ರದಲ್ಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ, ಬಿಬಿಎಂಪಿಯ ಕೌನ್ಸಿಲ್ ನ ವಿಷಯ ಸಂಖ್ಯೆ: 658/2021-22, ದಿನಾಂಕ: 31-03-2022 ರನ್ವಯ ಅನುಮೋದನೆಯಾಗಿರುವ ಲೇಖಾನುದಾನಕ್ಕೆ ಘಟನೋತ್ತರವಾಗಿ ಸ್ಥಿರೀಕರಣ ನೀಡಿ, ಈ ಕೆಳಕಂಡ ಬದಲಾವಣೆಗಳೊಂದಿಗೆ 2021-22ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2022-23ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ಸರ್ಕಾರದ ಅನುಮೋದನೆ ನೀಡಿದೆ ಎಂದು ತಿಳಿಸಲು ನಿರ್ದೇಶಿತನಾಗಿದ್ದೇನೆ.

ಮುಂದುವರೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಹೆಚ್ಚುವರಿಯಾಗಿ ಸಂಗ್ರಹಿಸಬಹುದಾದ ಆದಾಯವನ್ನು ಖಾತ್ರಿಪಡಿಸಿಕೊಂಡು, ತದನಂತರದಲ್ಲಿ, ಈ ಕೆಳಕಂಡಂತೆ ನಿಗಧಿಪಡಿಸಲಾದ ಹೆಚ್ಚುವರಿ ಅನುದಾನದಡಿ ಈ ಕೆಳಕಂಡ ಕಾರ್ಯಕ್ರಮ / ಕಾಮಗಾರಿಗಳನ್ನು ಕೈಗೊಳ್ಳುವ ಹೆಚ್ಚುವರಿ ವೆಚ್ಚಗಳಿಗೆ ಬಿಬಿಎಂಪಿಯ 2022-23ನೇ ಸಾಲಿನ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ.

...2/-

Scanned with CamScanner

1) ಮಾನ್ಯ ಉಚ್ಚ ನ್ಯಾಯಾಲಯದ ವಿವಿಧ ಪ್ರಕರಣಗಳಿಗೆ ಸಂಬಂಧಿಸಿದಂತೆ, ಘನತ್ಯಾಜ್ಯ ನಿರ್ವಹಣೆ ಘಟಕಗಳ ಮತ್ತು ಯಂತ್ರೋಪಕರಣಗಳ ದುರಸ್ತಿ ಮತ್ತು ನಿರ್ವಹಣೆ ಸಲುವಾಗಿ ನಿಗದಿಪಡಿಸಲಾದ ರೂ.15.00 ಕೋಟಿಗಳ ಬದಲಿಗೆ ರೂ.90.00 ಕೋಟಿಗಳನ್ನು ಲೆಕ್ಕ ಶೀರ್ಷಿಕೆ ಸಂಖ್ಯೆ: ಪಿ-3116, ಪಿ-3789 ರಡಿ ನಿಗಧಿಪಡಿಸಿದೆ.

2) ಲೆಕ್ಕ ಶೀರ್ಷಿಕೆ ಸಂಖ್ಯೆ: ಪಿ-1802 ರಡಿ ಕುಡಿಯುವ ನೀರು ಪೂರೈಕೆ ಸಲುವಾಗಿ (ನಾಗರೀಕರ ಬೇಡಿಕೆಗೆ ಅನುಗುಣವಾಗಿ ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿ ಸಲುವಾಗಿ) ನಿಗಧಿಪಡಿಸಲಾದ ರೂ.40.00 ಕೋಟಿಗಳ ಬದಲಿಗೆ ರೂ.65.00 ಕೋಟಿಗಳಿಗೆ ನಿಗಧಿಪಡಿಸಿದೆ. ಹೆಚ್ಚುವರಿ ರೂ.25.00 ಕೋಟಿಗಳನ್ನು ಕೊಳವೆ ಬಾವಿಗಳ ನಿರ್ವಹಣೆಗೆ ವಿನಿಯೋಗಿಸತಕ್ಕದ್ದು (ಸದರಿ ಕಾರ್ಯವನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ನಿರ್ವಹಿಸಿದಲ್ಲಿ ಸದರಿ ಅನುದಾನವನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ ಗೆ ವರ್ಗಾಯಿಸತಕ್ಕದ್ದು).

3) ಲೆಕ್ಕ ಶೀರ್ಷಿಕೆ ಸಂಖ್ಯೆ: ಪಿ-0968, ಪಿ-1715, ಪಿ-1789, ಪಿ-1860 ರಡಿ ಭೂಭರ್ತಿ ಘಟಕಗಳ ನಿರ್ವಹಣೆ / ತ್ಯಾಜ್ಯ ವಿಲೇವಾರಿ ಘಟಕಗಳು / ಗಣಿಗಳಿಗೆ ನಿಗಧಿಪಡಿಸಲಾದ ರೂ.20.00 ಕೋಟಿಗಳ ಅನುದಾನವನ್ನು ರೂ.95.00 ಕೋಟಿಗಳಿಗೆ ನಿಗಧಿಪಡಿಸಿದೆ.

4) ಲೆಕ್ಕ ಶೀರ್ಷಿಕೆ ಸಂಖ್ಯೆ: ಪಿ-3561 ರಡಿ ಸರ್ಕಾರದ ಅನುದಾನದಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ ಬಿಬಿಎಂಪಿ ವತಿಯಿಂದ ನೀಡಬೇಕಾಗುವ ಹೊಂದಾಣಿಕೆ ವಂತಿಗೆ (Matching Contribution) ಸಲುವಾಗಿ ರೂ.200.00 ಕೋಟಿಗಳನ್ನು ನಿಗಧಿಪಡಿಸಿದೆ.

5) ಲೆಕ್ಕ ಶೀರ್ಷಿಕೆ ಸಂಖ್ಯೆ: ಪಿ-3446 ರಲ್ಲಿ ಪೂಜ್ಯ ಮಹಾಪೌರರ ವಿವೇಚನಾ ಕೋಟಾದಡಿ ಪತ್ರಕರ್ತರು ಮತ್ತು ಮಾಧ್ಯಮ ವರದಿಗಾರರಿಗೆ ನೀಡಲಾಗುವ ವೈದ್ಯಕೀಯ ಪರಿಹಾರ ಅನುದಾನದ ಮೊತ್ತವನ್ನು ರೂ.50.00 ಲಕ್ಷಗಳಿಂದ ರೂ.2.00 ಕೋಟಿಗಳಿಗೆ ನಿಗಧಿಪಡಿಸಿದೆ.

6) ಶ್ರೀ ಐ.ಪಿ.ಡಿ. ಸಾಲಪ್ಪ ರವರ ಸ್ಮರಣಾರ್ಥ ನಡೆಸುವ ಕಲ್ಯಾಣ ಕಾರ್ಯಕ್ರಮಗಳಿಗೆ ರೂ.1.00 ಕೋಟಿಗಳ ಅನುದಾನವನ್ನು ನಿಗಧಿಪಪಡಿಸಿದೆ.

ತಮ್ಮ ನಂಬುಗೆಯ,

**(ಲಕ್ಷ್ಮೀಸಾಗರ್ ಎನ್.ಕೆ.)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

Scanned with CamScanner